

# ನಮ್ಮ ಕಾಲದ ಕನ್ನಡ ಸಾಲಿ ಮಾಸ್ತರುಗಳು

**‘ಈ ಶಾಲೆ–ಕಾಲೇಜಿನ ಸುತ್ತ 100 ಮೀಟರ್ ಸುತ್ತಳತೆಯಲ್ಲಿ ಯಾವುದೇ ರೀತಿಯ ತಂಬಾಕು ಉತ್ಪನ್ನಗಳನ್ನು ಮಾರುವುದನ್ನು ನಿಷೇಧಿಸಲಾಗಿದೆ’ ಎಂದು ಫಲಕ ಹಾಕುತ್ತೇವೆ. ಆ ಸೂಚನಾಫಲಕಗಳ ಅಡಿಯಲ್ಲಿ ‘ಇದು ಸುಪ್ರೀಂ ಕೋರ್ಟಿನ ಆದೇಶದ ಅನ್ವಯ’ ಅಂತಲೂ ಬರೆಸಿದ್ದೇವೆ. ಅಂದರೆ, ಆ ಮಾತನ್ನು ನಾವಾಗಿಯೇ ಹೇಳುವ ನೈತಿಕ ಧೈರ್ಯ ಕಳೆದುಕೊಂಡಿದ್ದೇವೆ. ಈ ನೈತಿಕತೆಯ ಕುಸಿತಕ್ಕೆ ಕನ್ನಡ ಸಾಲಿ ಮಾಸ್ತರುಗಳ ಪರಂಪರೆಯಲ್ಲಿ ಉಂಟಾಗಿರುವ ಕುಸಿತ ಕಾರಣವೇ?**

**■ ಡಾ. ನಾಗರಾಜ ಶೆಣೈ**

ಅದೊಂದು ಪಾನ್ ಬೀಡಾದ ಅಂಗಡಿ. ಪಾನ್ ತಿನ್ನುವವರು, ತಂಬಾಕು ಜಗಿಯುವವರು, ಬೀಡಿ–ಸಿಗರೇಟ್ ಸೇದುವವರು ಎಲ್ಲ ನೆರೆದು ತಮ್ಮ ಚಟಾರಾಧನೆಗಾಗಿ ಸೇರುವ, ಬೆರೆಯುವ, ಹರಟುವ ಜಾಗ. ಅಲ್ಲೇ ಕೆಲ ಚಿಕ್ಕ ವಯಸ್ಸಿನ ಮಕ್ಕಳೂ ಸೇರಿ ಕುತೂಹಲಕ್ಕಾಗಿಯೋ ಸಾಹಸಕ್ಕಾಗಿಯೋ ತಾವೂ ಒಂದೆರಡು ದಂ ಎಳೆಯಲು ಪ್ರಯತ್ನ ನಡೆಸಿರುತ್ತವೆ.

ಆಗ ಅಲ್ಲಿ ಹಾದು ಹೋಗುತ್ತಿದ್ದ ಕೃಶಕಾಯದ ಮಧ್ಯ ವಯಸ್ಕರೊಬ್ಬರು ಈ ಮಕ್ಕಳನ್ನು ಗಮನಿಸುತ್ತಾರೆ. ಅವರಿಗೆ ಸಿಟ್ಟು ನೆತ್ತಿಗೇರುತ್ತದೆ. ಕೂಡಲೇ ಅಲ್ಲಿಗೆ ಧಾವಿಸಿ ಬಂದು ಒಬ್ಬನ ಶರ್ಟ್ ಕಾಲರ್ ಹಿಡಿದು, ಮತ್ತೊಬ್ಬನಿಗೆ ಕಪಾಳಕ್ಕೆ ಬಾರಿಸುತ್ತಾರೆ. ನಿಂತಿದ್ದ ಮತ್ತೊಬ್ಬನ ತಲೆಗೂ ಏಟು ಬೀಳುತ್ತದೆ. ಪೆಟ್ಟಿನ ಜೊತೆಗೆ ‘ಇನ್ನೂ ಮೂತಿ ಮ್ಯಾಗ ಮೀಸಿ ಬಂದಿಲ್ಲ, ಬೀಡಿ ಸೇದಾಕ್ ಹತ್ತಿಯೇನೋ...’ ಎನ್ನುವ ಪ್ರಶ್ನೆ. ನೆರೆದ ದೊಡ್ಡವರೆಲ್ಲ ಇದು ಸಹಜ ಘಟನೆಯೆಂಬಂತೆ ತಾವು ಪಕ್ಕಕ್ಕೆ ಸರಿದು ನಿಲ್ಲುತ್ತಾರೆ.

ಪೆಟ್ಟು ತಿಂದ ಒಬ್ಬ ಬಾಲಕ ಈಗಾಗಲೇ ಪರಾರಿಯಾಗಿದ್ದಾನೆ. ಮೂಲೆಯಲ್ಲಿ ಸಿಕ್ಕಿಹಾಕಿಕೊಂಡವರಿಬ್ಬರೂ ‘ಇಲ್ರೀ ಸರ... ಇನ್ ಮ್ಯಾಲ ಮಾಡಂಗಿಲ್ಲರೀ...’ ಅಂತ ಬೇಡಿಕೊಂಡರೂ ಇವರು ಪಟ್ಟುಬಿಡುತ್ತಿಲ್ಲ. ‘ಏನಲೇ, ಯಾರ ಪೈಕಿ ನೀ... ನಿಮ್ಮನಿಗೆ ಬರಲೇನು... ನಿಮ್ಮಪ್ಪಂಗ್ ಹೇಳಲೇನು?’ ಇವರ ಜೋರಾವರಿ ನಡೆದೇ ಇತ್ತು. ‘ಬ್ಯಾಡರಿ... ಮಾಡಂಗಿಲ್ಲರಿ...’. ಎಷ್ಟೋ ಹೊತ್ತಿನ ನಂತರ ಬಾಲಕರಿಗೆ ಎಚ್ಚರಿಕೆಯೊಂದಿಗೆ ಮುಕ್ತಿ. ಪ್ರಶ್ನಾರ್ಥಕ ಚಿಹ್ನೆಯ ಮುಖದವನೊಬ್ಬ ಬಾಯಲ್ಲಿ ಪಾನ್ ತುಂಬಿಕೊಂಡು, ಹುಬ್ಬೇರಿಸಿಯೇ ಇನ್ನೊಬ್ಬನನ್ನ ವಿವರಣೆ ಕೇಳುತ್ತಾನೆ. ‘ಅವರಾ, ನಮ್ಮ ಕನ್ನಡ ಸಾಲಿ ಮಾಸ್ತರು..’!

ಇದು 70–80ರ ದಶಕದಲ್ಲಿ ಬೆಳಗಾವಿ ಜಿಲ್ಲೆಯ ಒಂದು ತಾಲೂಕು ಕೇಂದ್ರ. ದಿನವಿಡೀ ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಿದ ಮಾಸ್ತರುಗಳ ಶಾಲೆ ಬಿಟ್ಟ ನಂತರ ಸಮಯದ ಒಂದು ಚಿತ್ರಣ. ಅವನ್ಯಾರೋ ಯಾರ ಮಗನೋ ಶಾಲೆಗೇ ಹೋಗುತ್ತಾನೋ ಇಲ್ಲವೋ ಹೋದರೂ ಅದ್ಯಾವ ಶಾಲೆಯ ಹುಡುಗನೋ – ಇದ್ಯಾವುದೂ ಅವರಿಗೆ ಮುಖ್ಯವಾಗಿರಲಿಲ್ಲ. ತನ್ನ ವಿದ್ಯಾರ್ಥಿಗೆ ಮಾತ್ರವೇ ತಾನು ಪಾಠ ಹೇಳಬೇಕಾಗಿಲ್ಲ, ಸಮಾಜದ ಉಳಿದೆಲ್ಲ ಮಕ್ಕಳೂ ತನ್ನ ವಿದ್ಯಾರ್ಥಿಗಳೇ ಎಂಬಂತೆ ಬದುಕಿದವರು ನಮ್ಮ ಕನ್ನಡ ಸಾಲಿ ಮಾಸ್ತರುಗಳು.

ಆಗಲೂ ಈಗಿನಂತೆಯೇ ಪ್ರಾಥಮಿಕ ಶಾಲೆಯ ಶಿಕ್ಷಕರ ವೃತ್ತಿ ಎಂಬುದು ಹೆಚ್ಚು ಜವಾಬ್ದಾರಿಯ, ಕಡಿಮೆ ಸಂಬಳದ್ದೇ ಆಗಿತ್ತು. ಆದರೆ ಆಗ ಸರ್ಕಾರೀ ಶಾಲೆಗೆ ಪರ್ಯಾಯವೆಂಬುದು ಇರಲಿಲ್ಲ. ಸಮಾಜದ ಎಲ್ಲ ವರ್ಗಗಳ ಎಲ್ಲ ಶ್ರೇಣಿಗಳ ಜನರ ಮಕ್ಕಳು ಒಂದೆಡೆ ಸೇರಿ ಕಲಿಯುವ ಆ ಸ್ಥಳವೇ ತನ್ನ ವಿಶಿಷ್ಟ ಮಹಿಮೆಯದಾಗಿತ್ತು. ನಮಗೆಲ್ಲರಿಗೂ ನಮ್ಮ ನಮ್ಮ ಮನೆಯ ಆರ್ಥಿಕ